9) ಸಿದ್ದಪಲ್ಲಿ ತಾಂಡ
10) ಸದ್ದಪಲ್ಲಿ ತಾಂಡ
11) ಮುದ್ದಲ್ಲಪಲ್ಲಿ ತಾಂಡ
12) ಮೊಕಿಡಿಪಲ್ಲಿ ತಾಂಡ
13) ಬೂಮೆಪಲ್ಲಿ ತಾಂಡ
14) ಪಾರ್ವತಿಪುರ ತಾಂಡ
15) ಮಲಚಬಾವಿಪಲ್ಲಿ ತಾಂಡ
16) ದಾಳಿಗುಟ್ಟ ತಾಂಡ
17) ನಡಿಮಿ ತಾಂಡ
18) ಬಂಡಮೀಲಿ ತಾಂಡ
19) ಗುಜಾಲಿ ತಾಂಡ
20) ಬೆಟ್ಟಿಕೊಂಡ ತಾಂಡ
21) ಬಾಯಲು ತಾಂಡ

ಮೈಕೊರಿನ ವಿಕ್ರಾತ್ ಕಾರ್ಖಾನೆ ಕುರಿತು.

1281(1429) ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ (ಚಾಮರಾಜ) :— ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಕೊರಿನ ವಿಕ್ರಾತ್ ಕಾರ್ಖಾನೆ ವಿಚಾರದಲ್ಲಿ ಮತ್ತೆ ಕಾರ್ಮಿಕರು ಮತ್ತು ಆಡಳಿತ ಮಂಡಳಿ ನಡುವೆ ವಿವಾದ ಉಂಟಾಗಿದ್ದು, ಈ ಬಗ್ಗೆ ಸರ್ಕಾರಕ್ಕೆ ತಿಳಿದಿದೆಯೇ;

ಆ) ಈ ಸಂಬಂಧ ಸರ್ಕಾರ ಯಾವ ಯಾವ ಕ್ರಮ ಕೈಗೊಳ್ಳುವುದು;

ಇ) ಕಾರ್ಮಿಕರ ಹಿತಾಸಕ್ತಿ ಕಾಪಾಡುವಲ್ಲಿ ಸರ್ಕಾರದ ನಿಲುವೇನು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :—

ಅ) ಹೌದು.

ಆ) ಈ ವಿಷಯದಲ್ಲಿ ಸರ್ಕಾರ ಈಗಾಗಲೇ ಕಾರ್ಮಿಕರ ಆಯುಕ್ತರು, ಪ್ರಧಾನ ಕಾರ್ಮಿಕ-ಕಾರ್ಮಿಕ ಇಲಾಖೆ, ಕಾರ್ಮಿಕ ಸಚಿವರು ಹಾಗೂ ಕೈಗಾರಿಕಾ ಸಚಿವರ ಮಟ್ಟದಲ್ಲಿ ಹಲವಾರು ಸಭೆಗಳನ್ನು ಕರೆದು, ವಿ.ಟಿ.ಎಲ್.ಸ ಆಡಳಿತ ವರ್ಗ ಮತ್ತು

ಕಾರ್ಮಿಕರ ಸಂಘಗಳೊಂದಿಗೆ ಚರ್ಚೆ ನಡೆಸಿ, ಈ ವಿವಾದವನ್ನು ಐ.ಡಿ. ಆಕ್ಟ್ 1947ರ ಅನುಸಾರ ಇಂಡಸ್ಟ್ರಿಯಲ್ ಟ್ರಿಬ್ಯುನಲ್‌ಗೆ ಒಪ್ಪಿಸಿದೆ.

ಪರಿಣಾಮವಾಗಿ, ದಿ: 25-1-2001 ರಂದು ಆದಳಿತ ವರ್ಗ ಹಾಗೂ ಕಾರ್ಮಿಕ ಸಂಘದ ಮಧ್ಯೆ ಒಂದು ಒಪ್ಪಂದವಾಗಿ ಸದರಿ ವಿಷಯವನ್ನು ಬಗೆಹರಿಸಲಾಗಿದೆ.

ಇ) ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ 1947ರ ಸೆಕ್ಷನ್ 10-ಬಿ ರ ಪ್ರಕಾರ ಅಧಿಕಾರವನ್ನು ಚಲಾಯಿಸಿ, ಈ ಪ್ರಕರಣವನ್ನು ಇಂಡಸ್ಟ್ರಿಯಲ್ ಟ್ರಿಬ್ಯುನಲ್‌ಗೆ ಕಳುಹಿಸುವ ಮುನ್ನ, ಸರ್ಕಾರವು ಸದರಿ ಕಂಪನಿಯ ಪ್ರತಿಯೊಬ್ಬ ಕಾರ್ಮಿಕರಿಗೆ ಮಾಸಿಕ ತಲಾ ರೂ. 700-00ಗಳನ್ನು ಮಧ್ಯಂತರ ಪರಿಹಾರವಾಗಿ ಮಂಜೂರು ಮಾಡಿದೆ. ಹಾಗೂ ಪ್ರಕರಣವನ್ನು ಆಡಳಿತ ವರ್ಗ ಮತ್ತು ಕಾರ್ಮಿಕ ಸಂಘದೊಂದಿಗೆ ಬಗೆಹರಿಸಿಕೊಳ್ಳಲಾಗಿದೆ.

ಕೆ.ಎಸ್.ಐ.ಸಿ. ಘಟಕ ಮೈಸೂರು ಇಲ್ಲಿನ ಸಮಸ್ಯೆಗಳು.

1282(1431) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) :— ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೆ.ಎಸ್.ಐ.ಸಿ. ಮೈಸೂರು ಘಟಕದ ನೌಕರರುಗಳಿಗೆ 5ನೇ ವೇತನ ಆಯೋಗದನ್ವಯ ವೇತನ ನೀಡಲಾಗುತ್ತಿದೆಯೇ;

ಆ) ಇಲ್ಲದಿದ್ದಲ್ಲಿ ಕಾರಣಗಳೇನು?

ಇ) ಇವರುಗಳಿಗೆ 5ನೇ ವೇತನ ಆಯೋಗದನ್ವಯ ಜಾರಿಗೊಳಿಸುವ ಬಗ್ಗೆ ಹಾಗೂ ಈ ಸಂಬಂಧ ಯೂನಿಯನ್‌ನ ಇತರ ಬೇಡಿಕೆಗಳ ಬಗ್ಗೆ ಸರ್ಕಾರದ ನಿಲುವೇನು?

ಈ) ಕೆ.ಎಸ್.ಐ.ಸಿ.ಯ ಘಟಕವೊಂದಾದ ರೇಷ್ಮೆ ನೇಯ್ಗೆ ಕಾರ್ಖಾನೆ ಮೈಸೂರು ಇಲ್ಲಿನ ನೌಕರರುಗಳಿಗೆ 5ನೇ ವೇತನ ಆಯೋಗದನ್ವಯ ಪರಿಷ್ಕೃತ ವೇತನ ಶ್ರೇಣಿಯನ್ನು ಯಥಾವತ್ತಾಗಿ ವಿಸ್ತರಿಸಿರುವುದಿಲ್ಲ.

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :—

ಅ) ಪ್ರಸ್ತುತ ಕರ್ನಾಟಕದಲ್ಲಿ ಕೆ.ಎಸ್.ಐ.ಸಿ.ಯನ್ನು ರೋಗಗ್ರಸ್ತ ಉದ್ದಿಮೆಯಾಗಿ ಪರಿಗಣಿಸಿ ಅದರ ಪುನಶ್ಚೇತನಕ್ಕಾಗಿ ಬಿಐಎಫ್‌ಆರ್ ಸಂಸ್ಥೆಗೆ ಮತ್ತು ವಿಐಎಫ್‌ಆರ್ ಸಂಸ್ಥೆಯು ನಿಗಮದ ಪುನಶ್ಚೇತನಕ್ಕಾಗಿ ಯೋಜನೆಯನ್ನು 1995ರಲ್ಲಿ ರೂಪಿಸಿರುತ್ತದೆ. ನಿಗಮದ ಪುನಶ್ಚೇತನ ಪ್ರಸ್ತಾವನೆ ರೂಪು ರೇಷೆಯಂತೆ ನಿಗಮವು ನಷ್ಟದಿಂದ ಹೊರಬಂದು